ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

15. (92) ಶ್ರೀ ಕೃಷ್ಣಮೂರ್ತಿ ಎಂ. ಟಿ.(ತುರುವೇಕೆರೆ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಕ್ರೀಡಾಂಗಣವಿಲ್ಲದೇ ಈ ಭಾಗದ ಪ್ರತಿಭಾವಂತ ಕ್ರೀಡಾಪಟುಗಳಿಗೆ ಅಭ್ಯಾಸ ನಡೆಸಲು ಅನಾನುಕೂಲ ವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಭಾಗದ ಪ್ರತಿಭಾವಂತ ಕ್ರೀಡಾಪಟುಗಳಿಗೆ ಅನುಕೂಲವಾಗುವ ಹಿತದೃಷ್ಟಿಯಿಂದ ಇದೇ ಸಾಲಿನಲ್ಲಿ ಕ್ರೀಡಾಂಗಣ ನಿರ್ಮಿಸಿ ಅನುಕೂಲ ಮಾಡಿಕೊಡಲು ಸರ್ಕಾರವು ಕೈಗೊಳ್ಳುವ ಕ್ರಮವೇನು ?

ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು

ಅ) ಬಂದಿದೆ.

ಆ) ತುರುವೇಕೆರೆ ತಾಲ್ಲೂಕಿನಲ್ಲಿ ಕ್ರೀಡಾಂಗಣ ನಿರ್ಮಿಸಲು ಸರ್ಕಾರಿ ಪದವಿಪೂರ್ವ ಕಾಲೇಜು, ತುರುವೇಕೆರೆ ಇಲ್ಲಿಯ 4 ಎಕರೆ ಜಮೀನನ್ನು ತಾಲ್ಲೂಕು ಕ್ರೀಡಾಂಗಣ ನಿರ್ಮಾಣಕ್ಕಾಗಿ ಯುವಜನಸೇವಾ ಮತ್ತು ಕ್ರೀಡಾ ಇಲಾಖೆಗೆ ಹಸ್ತಾಂತರಿಸಲಾಗಿದೆ. ಸದರಿ ಭಾಗದ ಪ್ರತಿಭಾವಂತ ಕ್ರೀಡಾಪಟುಗಳಿಗೆ ಅನುಕೂಲವಾಗುವಂತೆ ತುರುವೇಕೆರೆ ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಕಾರ್ಯವನ್ನು 12ನೇ ಹಣಕಾಸಿನ ಆಯೋಗದ ಧನಸಹಾಯದಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಪ್ರಾರಂಭಿಸಲಾಗುವುದು.

16,(2) ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸೊರಬ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಪೊಲೀಸ್ ಇಲಾಖೆಯಲ್ಲಿ ಪೊಲೀಸ್ ಪೇದೆಗಳು ಕಡಿಮೆ ಪ್ರಮಾಣದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಗ್ರಾಮೀಣ ಪ್ರದೇಶದಲ್ಲಿರುವ ಪೇದೆಗಳು ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿವುದು ನಿಜವೇ?

ಇ) ಹಾಗಿದ್ದಲ್ಲಿ ಪರಿಹಾರ ಕ್ರಮವೇನು ?

ಶ್ರೀ ಹೆಚ್. ಡಿ. ಕುಮಾರಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು

ಅ) ರಾಜ್ಯ ಪೊಲೀಸ್ ಇಲಾಖೆಯ ಎಲ್ಲಾ ವಿವಿಧ ಘಟಕಗಳಲ್ಲಿ ಪೊಲೀಸ್ ಪೇದೆಗಳ ಸಾಕಷ್ಟು ಮಂಜೂರಾತಿ ಬಲ ಇರುತ್ತದೆ. ಆದರೂ ಸಹ

ಕೆಲವು ಘಟಕಗಳಿಂದ ಪೊಲೀಸ್ ಪೇದೆ ಹುದ್ದೆಗಳು ಸೇರಿದಂತೆ ಹೆಚ್ಚುವರಿ ಸಿಬ್ಬಂದಿಯ ಮಂಜೂರಾತಿಗಾಗಿ ಬೇಡಿಕೆಗಳು ಇರುತ್ತವೆ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

17, (3) ಶ್ರೀ ಕುಮಾರ್ ಬಂಗಾರಪ್ಪ. ಎಸ್ (ಸೊರಬ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಶಿವಮೊಗ್ಗ ಗಂಗಾಮೂಲ ತಡಸ ರಾಜ್ಯ ಹೆದ್ದಾರಿಯನ್ನು ಅಭಿವೃದ್ಧಿಪಡಿಲು ಯೋಜನೆಯನ್ನು ಸಿದ್ಧಪಡಿಲಾಗಿದೆಯೇ;

ಆ) ಯಾವ ನೆರವಿನಡಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ;

ಇ) ಈ ಯೋಜನೆಯಡಿ ಬರುವ ಭಾರಿ ಗಾತ್ರದ ಸೇತುವೆಗಳೆಷ್ಟು;

ಈ) ಸೊರಬ ತಾಲ್ಲೂಕು ಹಿರೇಕಲಗೋಡು ಮತ್ತು ಹಲಸಿನಕೊಪ್ಪ ಸ್ಥಳಗಳಲ್ಲಿ ಅತಿ ಅವಶ್ಯವಾಗಿರುವಂತಹ ಸೇತುವೆಗಳನ್ನು ಯೋಜನೆಯಲ್ಲಿ ಸೇರಿಸಲಾಗಿದೆಯೇ;

ಉ) ಈ ಎರಡೂ ಸೇತುವೆಗಳೂ ಸೇರಿದಂತೆ ಇನ್ನು ಹಲವು ಭಾರಿ ಗಾತ್ರದ ಸೇತುವೆಗಳ ನಿರ್ಮಾಣ ಕಾರ್ಯದ ಬಗ್ಗೆ ಲೋಕೋಪಯೋಗಿ ಇಲಾಖೆಯ ಪಾತ್ರವಿದೆಯೇ; ಹಾಗಿಲ್ಲದಿದ್ದಲ್ಲಿ ಇದರ ಅವಶ್ಯಕತೆಯ ಬಗ್ಗೆ ಸರ್ಕಾರ ಚಿಂತಿಸುವುದೇ?

ಶ್ರೀ ಹೆಚ್. ಡಿ. ಕುಮಾರಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು

ಅ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ಕೈಗೊಳ್ಳಲಾದ ರಾಜ್ಯ ಹೆದ್ದಾರಿ ನಿರ್ವಹಣೆ ವಿಭಾಗದ ಪ್ಯಾಕೇಜ್–1 ಮತ್ತು 2 ರಲ್ಲಿ ಈ ರಸ್ತೆಯನ್ನು ಮೂರು ವರ್ಷಗಳ ನಿರ್ವಹಣೆಗಾಗಿ ತೆಗೆದುಕೊಳ್ಳಲಾಗಿದೆ.

ಸದರಿ ರಸ್ತೆಯ ಕಾಮಗಾರಿಯನ್ನು ಈಗ ಪಡುಬಿದ್ರಿ ಚಿಕ್ಕಲಗೋಡು ರಾಜ್ಯ ಹೆದ್ದಾರಿ ಸಂಖ್ಯೆ–1 ಎಂದು ಮರುನಾಮಕರಣ ಮಾಡಲಾಗಿದೆ.

ಈ ರಸ್ತೆಯು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ, ಹೊಸನಗರ, ಸಾಗರ, ಶಿಕಾರಿಪುರ ಮತ್ತು ಸೊರಬ ತಾಲ್ಲೂಕುಗಳಲ್ಲಿ ಹಾದು ಹೋಗುತ್ತದೆ. ಈ ರಸ್ತೆಯ ಒಟ್ಟು ಉದ್ದ 162.70 ಕಿ.ಮೀ. ಇರುತ್ತದೆ. ಸದರಿ ಯೋಜನೆಯಲ್ಲಿ ಈ ರಸ್ತೆಯನ್ನು ಕೆಳಕಂಡಂತೆ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ.

ಸಾಮಾನ್ಯ ನಿರ್ವಹಣೆ – 162.7 ಕಿ.ಮೀ.

ಮರುಡಾಂಬರೀಕರಣ – 88.3 ಕಿ.ಮೀ.